ಇ.ಎಕ್ಸ 162/2015 ಪಿ.ಡಬ್ಲ್ಯೂ- 1

<u>ಸಾಕ್ಷಿಯನ್ನು ದಿನಾಂಕ 8.7.2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀಸವಾಲುಃ ಜೆ.ಡಿಆರ್ ಪರ ವಕೀಲರಿಂದಃ</u>

ನನಗೆ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಸರಿ. ನಾನು ವ್ಯವಸಾಯ ಮಾಡುತ್ತೇನೆ ಮತ್ತು ಮನೆ ಕಟ್ಟುವ ಕೆಲಸ ಮಾಡುತ್ತೇನೆ. ನನಗೆ ವಾದಿಯ ಪರಿಚಯವಿರುತ್ತದೆ. ಶಂಭಪ್ಪ ರವರಿಗೆ ಮರಮ್ಮ ಎಂಬ ಹೆಂಡತಿ, ಕಾಡಬಸಪ್ಪ, ಶಂಭುಲಿಂಗಪ್ಪ ಮತ್ತು ಶಿವಣ್ಣ ಎಂಬ ಮಕ್ಕಳಿರುತ್ತಾರೆ ಎಂದರೆ ಸರಿ. ನಾನು ಬೇರೆಯವರ ಬಳಿ ಸಹ ಜಮೀನು ಖರೀದಿ ಮಾಡಿರುತ್ತೇನೆ ಎಂದರೆ ಸರಿ. ನನ್ನ ಗ್ರಾಮದಲ್ಲಿ ನಾನು ಸಣ್ಣಪ್ಪ ಬಿನ್ ಶಿವಣ್ಣ ರವರಿಂದ ಸ.ನಂ.171/2 ರಲ್ಲಿ 3-00 ಎಕರೆ ಸ್ವತ್ತನ್ನು ಖರೀದಿ ಮಾಡಿರುತ್ತೇನೆ. ಸಾಮಾನ್ಯವಾಗಿ ನಾನು ಜಮೀನನ್ನು ಖರೀದಿ ಮಾಡುವಾಗ ಆರ್ ಟಿ ಸಿ ಮತ್ತು ಮ್ಯುಟೇಶನ್ ನ್ನು ನೋಡಿ ಸ್ವತ್ತನ್ನು ಖರೀದಿ ಮಾಡುತ್ತೇನೆ. ಯಾರ ಹೆಸರಿನಲ್ಲಿ ಪಹಣಿ ಇರುತ್ತದೊ ಅವರ ಬಳಿ ನಾನು ಮಾತುಕತೆ ಮಾಡಿ ಸ್ವತ್ತನ್ನು ಖರೀದಿ ಮಾಡುತ್ತೇನೆ ಎಂದರೆ ಸರಿ. ನಾನು ಖರೀದಿ ಮಾಡುವ ಸಮಯದಲ್ಲಿ ಮೇಲ್ಕಂಡ ಸ್ವತ್ತು ವಾದಿಯ ಹೆಸರಿನಲ್ಲಿತ್ತು. ನಾನು ವಾದಿ ಬಳಿ ಮಾತ್ರ ಕರಾರು ಪತ್ರ ಪಡೆದುಕೊಳ್ಳಬೇಕಿತ್ತು ಎಂದರೆ ಸರಿ.

ನಾನು ಈ ಕೇಸಿನ 1 ರಿಂದ 3 ನೇ ಪ್ರತಿವಾದಿಗಳ ವಿರುದ್ಧ ಕ್ರಯಪತ್ರ ಬರೆದುಕೊಡಬೇಕೆಂದು ಓ ಎಸ್ ನಂ.209/2007 ರಂತೆ ದಾವೆ ಹೂಡಿರುತ್ತೇನೆ. ಸದರಿ ವ್ಯಕ್ತಿಗಳು ಮಾತ್ರ ನನ್ನ ಹೆಸರಿಗೆ ಕರಾರು ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಕರಾರು ಪತ್ರವನ್ನು 2007 ನೇ ಇಸವಿಯಲ್ಲಿ ಮಾಡಲಾಗಿರುತ್ತದೆ. ಅದು ನೋಂದಣಿಯಾಗಿರುತ್ತದೆ. ಸದರಿ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ದಾಖಲೆಯನ್ನು ನನ್ನ ವಕೀಲರು ನ್ಯಾಯಾಲಯಕ್ಕೆ ಹಾಜರುಪಡಿಸಿರಬಹುದು. ನನಗೆ ಆಂಗ್ಲ ಭಾಷೆಯನ್ನು ಓದಲು ಬರುವುದಿಲ್ಲ. ಸದರಿ ದಾಖಲೆಯನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಭಾಗ ಬರಬೇಕೆಂದು ವಾದಿ ಈ ದಾವೆಯನ್ನು ಹೂಡಿರುತ್ತಾರೆ. ಓ ಎಸ್ ನಂ.209/2007 ನ್ನು ಕ್ರಯಪತ್ರ ಬರೆದುಕೊಡಲು 1 ರಿಂದ 3 ನೇ ಪ್ರತಿವಾದಿಗಳ ವಿರುದ್ಧ ಹೂಡಿರುತ್ತೇನೆ. ಸದರಿ ಕರಾರು ಪತ್ರ 2002 ನೇ ಇಸವಿಗೆ ಸಂಬಂಧಟಪಟ್ಟಿರುತ್ತದೆ ಎಂದರೆ ಸಾಕ್ಷಿ ಮರೆತು ಹೋಗಿರುತ್ತದೆ ಎನ್ನುತ್ತಾರೆ. ಸದರಿ ದಾವೆಯನ್ನು ಹೂಡುವಾಗ ಅದು ಕಾಲಪರಿಮಿತಿ ಮುಗಿದು ಹೋಗಿತ್ತು ಎಂದರೆ ಸರಿಯಲ್ಲ. ಸದರಿ ದಾವೆ ಹೂಡುವ ಮೊದಲು ನಾನು ಪ್ರತಿವಾದಿ 1 ರಿಂದ 3 ರವರಿಗೆ ನೋಟೀಸ್ ನೀಡಿರುತ್ತೇನೆ. ಅದರ ನೋಟೀಸ್ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ವಾದಿಯನ್ನು ಸದರಿ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಮತ್ತು ಅವರಿಗೆ ನೋಟೀಸ್ ಸಹ ನೀಡಿರುವುದಿಲ್ಲ ಎಂದರೆ ಸರಿ. ಸದರಿ ಸ್ವತ್ತು ಈಗಲೂ ಸಹ ವಾದಿ ಸ್ವಾಧೀನದಲ್ಲಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರತಿವಾದಿ 1 ರಿಂದ 3 ರವರು ವಿಭಾಗ ಮಾಡಿಕೊಂಡು ಕ್ರಯಪತ್ರ ಬರೆದುಕೊಡುತ್ತೇನೆಂದು ಗ್ರಾಮದ ಹಿರಿಯರ ಮುಂದೆ ತಿಳಿಸಿರುತ್ತಾರೆ ಎಂದರೆ ಸರಿ.

ಓ ಎಸ್ ನಂ.209/2007 ರಲ್ಲಿ ನಾನು ಮತ್ತು ಈ ಕೇಸಿನ 1 ರಿಂದ 3 ನೇ ಪ್ರತಿವಾದಿ ರಾಜೀ ಮಾಡಿಕೊಂಡು ರಾಜೀ ಪತ್ರ ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ರಾಜಿ ಮಾಡಿಕೊಂಡಾಗ ಈ ಕೇಸಿನ ವಾದಿಯನ್ನು ಪಕ್ಷಗಾರರನ್ನಾಗಿ ಮಾಡಿಕೊಂಡಿಲ್ಲ ಎಂದರೆ ಸರಿ. ಸದರಿ ರಾಜೀ ಪತ್ರದಲ್ಲಿ ವಾದಿ ಪಕ್ಷಗಾರರಾಗದ ಕಾರಣ, ರಾಜೀ ಡಿಕ್ರಿ ವಾದಿಯ

ಮೇಲೆ ಬಾದಕರಾಗುವುದಿಲ್ಲ ಎಂದರೆ ಸರಿಯಲ್ಲ. ಮೂಲ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ನನ್ನ ಬಳಿ ಇರುವುದಿಲ್ಲ ವಾದಿ ಬಳಿ ಇರುತ್ತದೆ ಎನ್ನುವರು. ಸದರಿ ವಿಭಾಗ ಪತ್ರವನ್ನು ನಾನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಹಳೆ ದಾವೆಯಲ್ಲಿ ನಾನು ದಾವಾ ಸ್ವತ್ತು ಪ್ರತಿವಾದಿ 1 ರಿಂದ 3 ರವರ ಪಾಲಿಗೆ ಬಂದಿರುತ್ತದೆ ಎಂದು ಹೇಳಿ ಬರೆಸಿರುತ್ತೇನೊ ಇಲ್ಲವೊ ನನಗೆ ನೆನಪಿಲ್ಲ. ಕರಾರು ಪತ್ರದಲ್ಲಿ ದಾವಾ ಸ್ವತ್ತು ಪ್ರತಿವಾದಿ 1 ರಿಂದ 3 ರವರ ಪಾಲಿಗೆ ಬಂದಿರುತ್ತದೆ ಎಂದು ನಮೂದು ಮಾಡಿರುತ್ತಾರೊ ಇಲ್ಲವೊ ನನಗೆ ಈಗ ನೆನಪಿಲ್ಲ.

ದಾವಾಸ್ವತ್ತು ಈಗಲೂ ಸಹ ವಾದಿ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ವಾದಿ ಗಲಾಟೆ ಮಾಡಿದ ಕಾರಣ ದಾವಾಸ್ವತ್ತು ಈಗಲೂ ಸಹ ಹಾಗೆಯೇ ಇದೆ ಎನ್ನುವರು. 2016 ರಲ್ಲಿ ನಾವು ನ್ಯಾಯಾಲಯದಿಂದ ಡಿಕ್ರಿ ಪಡೆದುಕೊಂಡು ವಾದಿಯ ಸ್ವಾಧೀನಕ್ಕೆ ತೊಂದರೆ ನೀಡಿರುತ್ತೇವೆ, ಆಗ ಆತನಿಗೆ ಡಿಕ್ರಿ ವಿಚಾರ ತಿಳಿದಿರುತ್ತದೆ ಎಂದರೆ ಸರಿಯಲ್ಲ. ವಾದಿ ಆತನ ಸ್ವಾಧೀನಕ್ಕೆ ತೊಂದರೆ ನೀಡಿದಾಗ ದೂರು ನೀಡಿರುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರೆದು ನಾನು ಬೆಳೆದ ಬೆಳೆ ತೆಗೆಯಲು ಹೋದಾಗ ವಾದಿ ದೂರು ನೀಡಿರುತ್ತಾರೆ ಎನ್ನುವರು. ಸದರಿ ನ್ಯಾಯಾಲಯದ ಡಿಕ್ರಿ ಮೇಲೆ ನಾನು ಅಮಲ್ಜಾರಿಯನ್ನು 162/15 ರಂತೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಅಮಲ್ಜಾರಿ ದಾಖಲು ಮಾಡಿದಾಗ ದಾವಾಸ್ವತ್ತು ಸ್ವಾಧೀನವನ್ನು ನಾನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಅಮಲ್ಜಾರಿಯಲ್ಲಿ ದಾವಾಸ್ವತ್ತಿನ ಸ್ವಾಧೀನವನ್ನು ನನಗೆ ಕೊಡಿಸಬೇಕೆಂದು ಕೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾಸ್ವತ್ತಿನ ಸ್ವಾಧೀನವನ್ನು ಹೊಂದಿರಲಿಲ್ಲ ಎಂದರೆ ಸರಿಯಲ್ಲ.

ಓಎಸ್ 209/2007 ರಲ್ಲಿ ಈ ಕೇಸಿನ ವಾದಿ ಮತ್ತು ಅವರ ಕುಟುಂಬಸ್ಥರ ನಡುವೆ ವಿಭಾಗವಾಗಿ ದಾವಾಸ್ವತ್ತು ನನ್ನ ಮಾರಾಟಗಾರರ ಪಾಲಿಗೆ ಬಂದಿರುತ್ತದೆ ಎಂದು ನನ್ನ ವಾದ ಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ನಾನು ಕರಾರುಪತ್ರವನ್ನು ಈ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ತಾನು ಹಾಜರುಪಡಿಸಿರುವ ದಾಖಲೆಗಳನ್ನು ತೋರಿಸಿ ಅದರಲ್ಲಿ ಕರಾರುಪತ್ರ ಇರುವುದಿಲ್ಲ ಎಂದರೆ ಸರಿ ಎನ್ನುವರು. ಸದರಿ ಕರಾರುಪತ್ರದಲ್ಲಿ ನನ್ನ ಮಾರಾಟಗಾರರ ಪಾಲಿಗೆ ದಾವಾಸ್ವತ್ತು ಬಂದಿರುತ್ತದೆ ಎಂದು ನಮೂದಾಗಿರುತ್ತದೆ. ಸದರಿ ಕರಾರುಪತ್ರವನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನಾನು ನ್ಯಾಯಾಲಯದಿಂದ ಡಿಕ್ರಿ ಪಡೆದುಕೊಳ್ಳುವ ಸಮಯದಲ್ಲಿ ದಾವಾಸ್ವತ್ತು ಖಾತೆ ವಾದಿ ಹೆಸರಿಗೆ ಇತ್ತು ಎಂದರೆ ಸರಿ. ವಾದಿಯ ಹೆಸರಿಗೆ ಖಾತೆ ಇದ್ದ ಬಗ್ಗೆ ನ್ಯಾಯಾಲಯಕ್ಕೆ ಹಳೇ ದಾವೆಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ನ್ಯಾಯಾಲಯಕ್ಕೆ ನಾವು ನಿಜಾಂಶ ಮರೆಮಾಚಿ ಅಕ್ರಮವಾಗಿ ಡಿಕ್ರಿ ಪಡೆದುಕೊಂಡ ಕಾರಣ ಅದು ಕಾನೂನು ಅಡಿಯಲ್ಲಿ ಊರ್ಜಿತವಾಗುವುದಿಲ್ಲ ಮತ್ತು ವಾದಿಗೆ ಬದ್ಧಪಡಿಸುವುದಿಲ್ಲ ಎಂದರೆ ಸರಿಯಲ್ಲ. ಸದರಿ ಡಿಕ್ರಿ ಜಾರಿಗೊಳಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.